ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com

ಇಮೇಲ್ ಐಡಿ: dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ಕವಿಪ್ರನಿನಿ/ಬಿ19/345/85-86

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು-560009,
ದಿನಾಂಕ: 06.02.2021.

## ಸುತ್ತೋಲೆ

ವಿಷಯ: ವಿದ್ಯುತ್ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡುವ ಮೊದಲು ಹಾಗೂ ಗುತ್ತಿಗೆದಾರರಿಂದ ಸಮಾಪನಾ ವರದಿಗಳನ್ನು ಪಡೆಯುವಾಗ ಗುತ್ತಿಗೆದಾರರ ಪರವಾನಗಿಯ ವಿವರಗಳನ್ನು ಆನ್ ಲೈನ್‌ನಲ್ಲಿ ಪರಿಶೀಲಿಸುವ ಕುರಿತಂತೆ.

ಉಲ್ಲೇಖ:
1. ಮುಖ್ಯ ವಿದ್ಯುತ್ ಪರಿವೀಕ್ಷಕರು (ಪ್ರಭಾರ) ರವರ ಪತ್ರ ಸಂಖ್ಯೆ: ಮುವಿಪ/ಅಮುವಿಪ/ವಿಪ(ಪ)/31677-82/20-21 ದಿನಾಂಕ:19.01.2021.
2. ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿತ ಟಿಪ್ಪಣಿ ದಿನಾಂಕ: 05.02.2021.

******

ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 53ರಲ್ಲಿ ತಿಳಿಸಿರುವಂತೆ *ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ* Central Electricity Authority (Measures Relating to safety and Electric Supply) Regulations 2010ನ್ನು ಜಾರಿಗೆ ತಂದಿದ್ದು, ಸದರಿ ರೆಗ್ಯೂಲೇಷನ್ ನಂ.29ರ ಅನುಸಾರ ರಾಜ್ಯ ಸರ್ಕಾರವು ವಿದ್ಯುತ್ ಕೆಲಸಗಳನ್ನು ನಿರ್ವಹಿಸುವ ಬಗ್ಗೆ The Karnataka (Licensing of Electrical Contractors, Special Wiring permit and grant of certificate and permits to Electrical Supervisors and Wireman) Rules, 2012 ಎಂಬ ನಿಯಮಗಳನ್ನು ಜಾರಿಗೊಳಿಸಿರುತ್ತದೆ.

ಸದರಿ ನಿಯಮದ ಅಡಿಯಲ್ಲಿ, ಮುಖ್ಯ ವಿದ್ಯುತ್ ಪರಿವೀಕ್ಷಕರು ರವರ ಕಛೇರಿಯಿಂದ ವಿದ್ಯುತ್ ಗುತ್ತಿಗೆದಾರರ ಸೂಪರ್ ಗ್ರೇಡ್, ವರ್ಗ-1, ವರ್ಗ-2, ವರ್ಗ-3, ವಿಶೇಷ ತಂತಿ ರಹದಾರಿ, ವಿದ್ಯುತ್ ಮೇಲ್ವಿಚಾರಕರ ರಹದಾರಿ ಮತ್ತು ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ನೀಡುತ್ತಿದ್ದು, ಈ ಎಲ್ಲಾ ಸೇವೆಗಳು ಈಗ ಆನ್‌ಲೈನ್ ಆಗಿರುತ್ತದೆ.

ಮುಂದುವರೆದು, *ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ* Central Electricity Authority (Measures Relating to safety and Electric Supply) Regulations 2010ರ ರೆಗ್ಯೂಲೇಷನ್ ನಂ.29 ರ ಅನುಸಾರ ಎಲ್ಲಾ ಎಸ್ಕಾಂ/ಕೆಪಿಟಿಸಿಎಲ್‌ಗಳಲ್ಲಿ ಟೆಂಡರ್ ಪ್ರಕ್ರಿಯೆ ಸಂದರ್ಭದಲ್ಲಿ ತಮ್ಮ ಅಧೀನ ಅಧಿಕಾರಿಗಳು ವಿದ್ಯುತ್

ಗುತ್ತಿಗೆದಾರರಿಗೆ ವಿದ್ಯುತ್ ಕಾಮಗಾರಿಯನ್ನು ನೀಡುವ ಮೊದಲು ಹಾಗೂ ವಿದ್ಯುತ್ ಗುತ್ತಿಗೆದಾರರಿಂದ ಸಮಾಪನಾ ವರದಿಗಳನ್ನು ಪಡೆಯುವಾಗ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ನೈಜತೆ, ವಿದ್ಯುತ್ ಮೇಲ್ವಿಚಾರಕರ ಹಾಗೂ ತಂತಿ ಕೆಲಸಗಾರರ ಹಿಂಬರಹವನ್ನು ಪರಿಶೀಲಿಸುವುದು ಅವಶ್ಯವಿದ್ದು ಕಡ್ಡಾಯವಾಗಿ ಆನ್ ಲೈನ್‌ನಲ್ಲಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯ ವಿದ್ಯುತ್ ಪರಿವೀಕ್ಷಕರು ಕೋರಿರುತ್ತಾರೆ.

ಈ ಸಂಬಂಧ, *ಮುಂದಿನ ದಿನಗಳಲ್ಲಿ* ಟೆಂಡರ್ ಕಾಮಗಾರಿ ಮಾಡುವ ಸಂದರ್ಭದಲ್ಲಿ ವಿದ್ಯುತ್ ಗುತ್ತಿಗೆದಾರರಿಗೆ ವಿದ್ಯುತ್ ಕಾಮಗಾರಿಯನ್ನು ನೀಡುವ ಮೊದಲು ಹಾಗೂ ವಿದ್ಯುತ್ ಗುತ್ತಿಗೆದಾರರಿಂದ ಸಮಾಪನಾ ವರದಿಗಳನ್ನು ಪಡೆಯುವಾಗ ಸಕ್ಷಮ ಅಧಿಕಾರಿಗಳು ಅವಶ್ಯವಾಗಿ ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ನೈಜತೆ, ವಿದ್ಯುತ್ ಮೇಲ್ವಿಚಾರಕರ ಹಾಗೂ ತಂತಿ ಕೆಲಸಗಾರರ ಹಿಂಬರಹವನ್ನು ಕಡ್ಡಾಯವಾಗಿ ಆನ್ ಲೈನ್‌ನಲ್ಲಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ವಿದ್ಯುತ್ ಗುತ್ತಿಗೆದಾರರ ಪರವಾನಗಿಯ ನೈಜತೆ ಹಾಗೂ ಹಿಂಬರಹವನ್ನು ಈ ಕೆಳಕಂಡ ಲಿಂಕ್ ಮುಖಾಂತರ ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ: ವೆಬ್ ಸೈಟ್: www.ksei.gov.in ನ ಅಡಿಯಲ್ಲಿ *Eservices - endorsement verification - contractor Licence / permit number / Endorsement Application number - submit.*

ಸದರಿ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಿದೆ.

6/2/2021

**ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)**
**ಕವಿಪ್ರನಿನಿ**

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ (ಸಿವಿಲ್), ಕವಿಪ್ರನಿನಿ.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/(ಸಿವಿಲ್), ಕವಿಪ್ರನಿನಿ.
6. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
8. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.

ಪ್ರತಿ:

ಅಧೀಕ್ಷಕ ಇಂಜಿನಿಯರ್(ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಬೆಂಗಳೂರುರವರಿಗೆ – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.